ಒಂದಾಣೆ ಮಾಲೆ 242

ಗೀತಗೋವಿಂದ

(ಭಾಗ ೨)

ಕನ್ನಡ ಗದ್ಯಾನುವಾದ:
ಶ್ರೀ। ಕೆ. ಎ. ದೇವದಾಸ,
ಸಾಹಿತ್ಯ ಶಿರೋಮಣಿ.

ಭಾಗ ೨: ನಾಲ್ಕು ಸರ್ಗಗಳು

1959

ಬೆಲೆ: ೩-ಆಣೆ.

ಒಂದಾಣೆ ಮಾಲೆ — ಮಂಗಳೂರು.

ಎಂದು ಕಪ್ಪಾದ ಕತ್ತಲೆಯನ್ನಪ್ಪಿಕೊಳ್ಳುತ್ತಾ ಮುದ್ದಿಡುತ್ತಾಳೆ. ನೀನು ಬರಲು ತಡಮಾಡಿದ್ದರಿಂದ ಲಜ್ಜೆ ತೊರೆದು ನಿನಗಾಗಿ ವಿಲಪಿಸುತ್ತಾ ಅಳುತ್ತಾ ಇದ್ದಾಳೆ."

(ಈ ಅಷ್ಟಪದಿಯಿಂದ ಹೀಗೆ ವಿವರಿಸಿ ಸಖಿಯು ಮತ್ತೂ ರಾಧೆಯ ಅವಸ್ಥೆಯನ್ನು ವಿವರಿಸುತ್ತಾಳೆ.)

"ಆ ಸಾಧ್ವೀಮಣಿಯು ನಿನ್ನ ಶೃಂಗಾರಸಾಗರದಲ್ಲಿ ಮುಳುಗಿ ನಿನ್ನ ಧ್ಯಾನದಲ್ಲಿ ಕುಳಿತಿರುತ್ತಾಳೆ. ಮೈ ನವಿರೆದ್ದಿದೆ. ಆಗಾಗ ಸೀತ್ಕಾರ ಮಾಡುತ್ತಾ "ಬಿಡ–ಬೇಡ" ಎಂಬ ಅಭ್ಯಂತರ ಶೃಂಗಾರಾರಂಭದ ಜಡತೆಯ ರೀತಿ ಉಚ್ಚರಿಸುತ್ತಾಳೆ. ಒಮ್ಮೊಮ್ಮೆ ಮೈತುಂಬಾ ಆಭರಣ ಧರಿಸುತ್ತಾಳೆ. ಎಲೆಯ ಶಬ್ದ ಕೇಳಿದರೂ ನೀನು ಬಂದೆಯೆಂದು ನೆನೆದು ಬೇಗ ಬೇಗ ಹಾಸಿಗೆ ತಯಾರಿಸುತ್ತಾಳೆ. ಆ ಮೇಲೆ ನಿನ್ನನ್ನು ಕಾಣದೆ ಯೋಚಿಸುತ್ತಾ ಕುಳಿತುಕೊಳ್ಳುತ್ತಾಳೆ ಈ ರೀತಿ ನೂರಾರು ಬಗೆಯಲ್ಲಿದ್ದರೂ ನೀನಿಲ್ಲದೆ ಈ ರಾತ್ರಿ ಕಳೆಯಲಾರಳೆಂಬುದು ನಿಜ."

(ಹೀಗೆ ಸಖಿಯು ಪುನಃ ಹರಿಯನ್ನು ಸಂಧಿಸಿ ರಾಧೆಯ ಅವಸ್ಥೆಯನ್ನು ವರ್ಣಿಸಿದಳೆಂಬಲ್ಲಿಗೆ ಆರನೆಯ ಸರ್ಗ ಮುಗಿದುದು.)

ಸರ್ಗಾವಸಾನದ ಮಂಗಲವಚನ:—

"ಸೋದರ, ಕೃಷ್ಣಭೋಗಿ (=ಕೃಷ್ಣಸರ್ಪ ಮತ್ತು ಕೃಷ್ಣನೊಂದಿಗೆ ಭೋಗಿಸಲು ಯೋಗ್ಯ) ನೆಲೆಯಾದ ಈ ಆಲದಮರದಡಿಯಲ್ಲಿ ಯಾಕೆ ಕುಳಿತಿದ್ದಿ? ಆ ತೋರುವ ನಂದಗೋಪನ ಮನೆಗೆ ಹೋಗಬಾರದೇ?' ಎಂದು ಒಂದು ಸಂಜೆ ರಾಧೆಯು ಒಬ್ಬ ಪಥಿಕನೊಡನೆ ಹೇಳಿದ ಮಾತನ್ನು ಅವನು ಬಂದು ನಂದನೊಡನೆ ಹೇಳಿದನು. ಆಗ ಆ ಮಾತಿನ ಇಂಗಿತವನ್ನರಿತ ಗೋವಿಂದನು ತೋರಿಕೆಗೊಡದೆ ಅವಳ ಅತಿಥಿಪ್ರೇಮವನ್ನು ನಂದನೊಡನೆ ಹೊಗಳಿದ ಆ ಮಾತುಗಳು ನಮ್ಮನ್ನು ಉದ್ಧರಿಸಲಿ."

(ಇಲ್ಲಿಗೆ ಆರನೆಯ ಸರ್ಗ ಮುಗಿದುದು.)

ಗೀತಗೋವಿಂದ

[ಭಾಗ ೩]

ಏಳನೆಯ ಸರ್ಗ

ನಾಗರ ನಾರಾಯಣ

(ಸಖಿಯು ಹರಿಯನ್ನು ಕಂಡು ರಾಧೆಯು ಸಂಕೇತ ಸ್ಥಳಕ್ಕೆ ಬರಲು ಹೇಳಿ ಹಿಂತಿರುಗಲಿಲ್ಲ. ದಿಗಂಗನೆಯು ಶ್ರೀಮುಖದ ಚಂದನ ತಿಲಕದಂತಿರುವ ಚಂದ್ರಮನು ಅಭಿಸಾರಿಕೆಯರ ರಹಸ್ಯ ಗಮನಕ್ಕೆ ಅಡ್ಡಿ ಮಾಡಿದ ಪಾಪದ ಕಲಂಕವನ್ನು ಹೊತ್ತುಕೊಂಡು ವೃಂದಾವನದ ವನಪ್ರದೇಶವನ್ನು ಬೆಳಗಿಸಿದನು. ಮಾಧವನು ಬರಲು ಇನ್ನೂ ವಿಳಂಬವಾಡುತ್ತಾನೆ. ರಾಧೆಯು ವ್ಯಥೆಯನ್ನು ತಾಳಲಾರದೆ ಗಟ್ಟಿಯಾಗಿ ವಿಲಪಿಸತೊಡಗಿದಳು.)

ಹದಿಮೂರನೆಯ ಅಷ್ಟಪದಿ

"ಸಖಿಯ ಭರವಸೆಯ ಮಾತಿನಿಂದ ವಂಚಿತಳಾದೆನಲ್ಲಾ! ಇನ್ನು ಯಾರನ್ನು ಮರೆಹೋಗಲಿ? ಯಮುನೆಯ ನೀರನ್ನೇ? ಹರಿಯು ಬರುವಂತಿಲ್ಲ. ಇನ್ನು ನನ್ನೀ ಯೌವನವು ಸುಮ್ಮನೆ. ಯಾರನ್ನು ಸೇರಿಕೊಳ್ಳಲಿಕ್ಕಾಗಿ ನಾನೀ ರಾತ್ರಿವೇಳೆ ಈ ಕಾಡನ್ನು ಸೇರಿದೆನೋ ಆ ರಂಗನೇ ನನ್ನ ಹೃದಯಕ್ಕೆ ಸ್ಮರಬಾಣದಿಂದ ಹೊಡೆದುಬಿಟ್ಟನು. ಈ ಕಾಡಿನಲ್ಲಿ ಅಚೇತಳಾಗಿದ್ದುಕೊಂಡು ಈ ವಿರಹತಾಪವನ್ನು ನಾನೇಕೆ ಸಹಿಸುತ್ತಿರಬೇಕು? ಈ ದೇಹ ವ್ಯರ್ಥ. ಮರಣವೇ ನನಗೆ ಲೇಸು. ಈ ಆಮೋದಕರವಾದ ಮಧುಮಾಸದ ರಾತ್ರಿಯು ನನ್ನನ್ನು ಯಾವ ಲೆಕ್ಕಕ್ಕೂ ತರಲಿಲ್ಲವಲ್ಲಾ! ಪುಣ್ಯವತಿಯಾದ ಯಾವಳೋ ಕಾಮಿನಿಯು ಈಗ ಹರಿಯನ್ನು ಉಪಭೋಗಿಸುತ್ತಾಳಾಗಿರಬಹುದು. ಹರಿಯ ವಿರಹಾಗ್ನಿಯು ನನ್ನನ್ನು ಸುಡುವಾಗ ನಾನೀ ಆಭರಣಗಳನ್ನು ತೊಟ್ಟಿದ್ದು ತಪ್ಪಾಯಿತು. ಮದನನ ಬಾಲಲೀಲೆ ಅತಿ ದಾರುಣ; ಕುಸುಮಸುಕುಮಾರವಾದ ನನ್ನ ದೇಹವನ್ನು ಈ ಪುಷ್ಪಮಾಲೆಯೂ ನೋಯಿಸುತ್ತಿದೆ. ನಾನಿಲ್ಲಿ ಕಾಡಿನ ಗಿಡಮರಗ

ಳನ್ನು ಎಣಿಸುತ್ತಾ ಬಿದ್ದುಕೊಂಡಿದ್ದೇನೆ. ಆದರೂ ಮಧುಸೂದನನು ಮನಸಾರೆ ನನ್ನನ್ನು ನೆನಸುವುದಿಲ್ಲವಲ್ಲ!"

(ರಾಧೆಯು ಹರಿಯಲ್ಲಿ ಸಂಶಯತಾಳುತ್ತಾಳೆ.)

"ಸಂಶಯ ತಿಳಿದೂ ಈ ವೇತಸಲತಾಕುಂಜಕ್ಕೆ ಕಾಂತನೇಕೆ ಬಾರನೋ? ಯಾವಳಾದರೂ ಕಾಮಿನಿಯು ಬೆನ್ನುಹತ್ತಿದಳೋ? ಅಲ್ಲ—ಗೆಳೆಯರ ತಂಡವು ಆಟಕ್ಕಾಗಿ ತಡೆದು ನಿಲ್ಲಿಸಿದರೋ? ಅಲ್ಲವೇ—ಕಾಡಿನಲ್ಲಿ—ಕತ್ತಲಲ್ಲಿ—ದಾರಿತಪ್ಪಿ ಅಲೆಯುತ್ತಿರಬಹುದೋ? ಅಥವಾ ನನ್ನ ಚಿಂತೆಯಿಂದ ಮನಸ್ಸು ಕರಗಿ ನಡೆಯಲೂ ಅಶಕ್ತನಾದನೋ!—ಏಕೆ ಬರಲಿಲ್ಲ?"

(ಹೀಗೆ ರಾಧೆ ಚಿಂತಿಸುತ್ತಿರುವಾಗ ಸಖಿಯು ಮರಳಿ ಬಂದಳು. ಆಗಲೂ ಸಂಗಡ ಕೃಷ್ಣನಿರಲಿಲ್ಲ: ಕಾರ್ಯಸಿದ್ಧಿಯಾಗದ ವಿಷಾದದಿಂದ ಸಖಿ ಮೂಕಳಾಗಿದ್ದಳು. ಆಗ ರಾಧೆಯು, ಖಂಡಿತವಾಗಿಯೂ ಹರಿಯು ಅವಳೊಂದಿಗೇ ರಮಿಸುತ್ತಿದ್ದಾನೆಂದು ಬಗೆದು, ಅದನ್ನು ಕಂಡಂತೆಯೇ ಸಖಿಯೊಡನೆ ಹೇಳುತ್ತಾಳೆ—)

ರಾಧೆಯ ಮಾತು. 14ನೇ ಅಷ್ಟಪದಿ

"ಸಖಿ, ತಿಳಿಯಿತು. ಸ್ಮರಸಮರಕ್ಕೆ ತಕ್ಕ ವೇಷ ರಚನೆಮಾಡಿಕೊಂಡು, ಮುಡಿದ ಹೂವು ಉದುರಿ, ಕೇಶಪಾಶವು ಚದರಿದ ಸುಂದರಿಯೂ ಯುವತಿಯೂ ಆದ ಚಪಲೆಯೋರ್ವಳು ಮಧುರಿಪುವಿನೊಂದಿಗೆ ರಮಿಸುತ್ತಾಳೆ. ಅವಳು ಹರಿಯ ಆಲಿಂಗನದಿಂದ ಮನ್ಮಥವಿಕಾರ ತಾಳಿ ಮನೋಹರವಾಗಿ ತೋರುತ್ತಾಳೆ. ಅವಳ ಹಾರವು ಕುಚಗಳೆಡೆ ಓಲಾಡುತ್ತದೆ. ಚಲಿಸುವ ಮುಂಗುರುಳುಗಳಿಂದ ಅವಳ ಮುಖಚಂದ್ರನಿಗೆ ಸೌಂದರ್ಯ ಕೂಡಿದೆ. ಅವನು ಅಧರಪಾನಮಾಡಿದ ರಭಸದಿಂದ ಅವಳಿಗೆ ರತಿಸುಖದ ಮಬ್ಬು ಹಿಡಿದಿದೆ; ಚಲಿಸುವ ಕುಂಡಲಗಳು ಕಪೋಲಗಳನ್ನು ಬರೆಸುತ್ತವೆ. ಮಣಿಮೇಖಲೆಯ ಧ್ವನಿಯೊಂದಿಗೆ ಜಘನವು ಚಲಿಸುವಾಗ ಅವಳೂ ಚಂಚಲಾಂಗಿಯಾಗುತ್ತಾಳೆ. ಅದೋ, ಪ್ರಿಯನು ನೋಡುವಾಗ ನಾಚಿ ನಗುತ್ತಾಳಾದರೂ ನಾನಾ ಬಗೆಯ ಸೀತ್ಕಾರ ಧ್ವನಿಯೊಂದಿಗೆ ಕ್ರೀಡಾರಸದ ಸಂತೃಪ್ತಿ ಪಡೆಯುತ್ತಾಳೆ. ಓಹೋ, ರೋಮಾಂಚವೂ ನಡುಕವೂ ಏರ್ಪಟ್ಟು ನಿಡುಸುಯ್ಯುತ್ತಾ ಕಣ್ಣು ಮುಚ್ಚಿ ಅನಂಗವಿಕಾಸದ ಸಮಾಧಿ

ಪಡೆದಳು. ಆಯಾಸದ ಬೆವರಹನಿಯಿಂದ ಶರೀರ ಸೌಂದರ್ಯ ಇಮ್ಮಡಿಸಿದೆ. ಸರಿ, ರತಿಸಮರದಲ್ಲಿ ಧೀರಳಾಗಿ ಕಮಲಾಕ್ಷನ ವೃಕ್ಷಸ್ಥಳಕ್ಕೆ ಒರಗಿಕೊಂಡಳು."

(ಈಗ ತನ್ನ ದುರವಸ್ಥೆಯನ್ನು ನೆನೆಯುತ್ತಾಳೆ.)

"ಸಖಿ, ಈ ಚಂದ್ರನು ನನ್ನ ವಿರಹದಿಂದ ಬೆಳ್ಳಗಾದ ಹರಿಯ ಮುಖದಂತೆ ತೋರುವನು. ಆಳಿರೂ ಇವನು ಕಂದರ್ಪನ ಮಿತ್ರ. ಆದ್ದರಿಂದ ಇವನು ನನ್ನ ಹೃದಯದಲ್ಲಿ ಮದನವಿಕಾರವನ್ನು ಹೆಚ್ಚಿಸುತ್ತಾನೆ."

(ಸಖಿಯು ಮಾತುಬಾರದೆ ಸುಮ್ಮನೆ ನಿಂತಿದ್ದಾಳೆ. ರಾಧೆಯು ಹರಿಯಲ್ಲಿ ಸಂದೇಹ ಬಲಗೊಂಡು ಪುನಃ ಹೇಳುತ್ತಾಳೆ—)

15ನೆಯ ಅಷ್ಟಪದಿ

"ಹುಂ! ಕಾಳಿಂದಿಯ ತಟದ ವನಪ್ರದೇಶದಲ್ಲಿ ರಂಗನು ರಮಿಸುತ್ತಾನೆ; ಆ ಸುಮುಖಿಯ ಮುಖ ಕಾಮೋದ್ರಿಕ್ತವಾಗಿದೆ. ಅವನು ಚುಂಬಿಸಿದ್ದರಿಂದ ಅವಳ ಚೆಂದುಟಿಯು ಸಂಕುಚಿತವಾಗುವುದನ್ನು ಕಂಡು ಅವನು ಆ ಮುಖಕ್ಕೆ ಕಸ್ತೂರಿಯ ತಿಲಕವನ್ನು ಹಚ್ಚುತ್ತಾನೆ. ಆಗ ಅವನ ವೈನವಿರೇಳುತ್ತದೆ. ಅವಳ ಮುಖದ ಮುಂಗುರುಳು ಮುಂಗಾರಿನಂತೆ ಆಕರ್ಷಕವಾಗಿದೆ. ತರುಣರನ್ನು ವಿಚಲಿತರನ್ನಾಗಿ ಮಾಡುವ ಮುಖವದು. ಆ ಮುಂಗುರುಳು ಮಾರನೆಂಬ ಹರಿಣದ ವಸತಿಯಾದ ಕಾಡೆನ್ನಬೇಕು. ಆ ಕುಂತಲದಲ್ಲಿ ಹರಿಯು ಮಿಂಚಿನಂತೆ ಮಿನುಗುವ ಕುರಬಕ ಕುಸುಮವನ್ನು ಮುಡಿಸುತ್ತಾನೆ. ಕಸ್ತೂರಿಯನ್ನು ಲೇಪಿಸಿದ ಕುಚಮಂಡಲವೆಂಬ ನೀಲಾಕಾಶದಲ್ಲಿ ರಂಗನು ಮುಕ್ತಾಹಾರವೆಂಬ ತಾರಾಗಣವನ್ನು ಕೂಡಿಡುತ್ತಾನೆ. ಅದನ್ನು ನಖಕ್ಷತವೆಂಬ ಅರ್ಧಚಂದ್ರನಿಂದ ಅಲಂಕರಿಸುತ್ತಾನೆ. ಮೃಣಾಲ ಕೋಮಲವಾದ ಬಾಹು, ತಾವರೆಯಂತಹ ಕೈ. ಅದು ಹಿಮದಂತೆ ಶೀತಲ. ಅದರಲ್ಲಿ ತುಂಬಿಗಳ ಸಾಲೆಂಬಂತಿರುವ ಮರಕತ ಮಣಿಯ ಬಳೆ ತೊಡಿಸುತ್ತಾನೆ. ಶೃಂಗಾರಕ್ಕೆ ಆಶ್ರಯವೂ, ಪರಿಪುಷ್ಟವಾದ್ದರಿಂದ ಮದನನ ಕನಕಸಿಂಹಾಸನದಂತೆಯೂ ಇರುವ ಅವಳ ನಿತಂಬಕ್ಕೆ ಮುತ್ತಿನ ಮೇಖಲೆಯ ಮಾಲೆ ಅರ್ಪಿಸುತ್ತಾನೆ. ಲಕ್ಷ್ಮೀಸಾನ್ನಿಧ್ಯವಿರುವ ಕಮಲದಂತೆ ಬೆಳಗುವ ಮತ್ತು ನಖಗಳೆಂಬ ರತ್ನ

ಗಳಿಂದ ಕಮನೀಯವಾದ ಆಕೆಯ ಪಾದಪಲ್ಲವವನ್ನು ಹರಿಯು ಎದೆಗೊತ್ತಿ ಹಿಡಿದು ಲಾಕ್ಷಾರಸ ಹಚ್ಚುತ್ತಾನೆ."

(ರಾಧೆಯು ಸಂದೇಹದೃಷ್ಟಿಯಿಂದ ಹೀಗೆ ಹೇಳಿ ಸಖಿಯನ್ನು ಕರೆದು ಹೇಳುತ್ತಾಳೆ—)

"ಸಖಿ, ಆ ಬಲಭದ್ರ ಸೋದರನಾದ ಖಳನು ಯಾವಳನ್ನೊ ರಮಿಸುತ್ತಿರುವಾಗ ನಾನೇಕೆ ನೀರಸವಾದ ಈ ಲತಾಗೃಹದಲ್ಲಿ ಇರಬೇಕು? ಹೇಳು. ನೀನು ದೂತಕಾರ್ಯದಲ್ಲಿ ಕುಶಲಳೆಂದು ನಾನು ಬಲ್ಲೆ. ನಿರ್ದಯನಾದ ಆ ಧೂರ್ತನು ಬಾರದಿದ್ದುದಕ್ಕೆ ನೀನು ಬೇಸರಿಸಬೇಕೇಕೆ? ಅವನಿಗೆ ಬಹು ಮಂದಿ ವಲ್ಲಭೆಯರು. ಅವನು ಸ್ವೇಚ್ಛೆಯಿಂದ ಅಲ್ಲಿ ರಮಿಸುತ್ತಿದ್ದರೆ ಅದರಲ್ಲಿ ನಿನ್ನ ತಪ್ಪಿಲ್ಲ. ನೋಡು, ಈ ನನ್ನ ಮನಸ್ಸು ಅದೇ ಕೃಷ್ಣನ ಸಂಗಮಕ್ಕಾಗಿ ಇನ್ನೂ ಹಾತೊರೆಯುತ್ತಿದೆ. ನನ್ನ ಕಾಂತನ ಸೌಂದರ್ಯಾದಿಗುಣಗಳಿಗೆ ಈ ಮನಸ್ಸು ಮಾರುಹೋಗಿದೆ. ಅದೀಗಲೂ ಉತ್ಸುಕತೆಯಿಂದಲೂ ಸ್ಮರವಿಕಾರದಿಂದಲೂ ಅವನ ಸಂಗಮಕ್ಕೆ ತವಕಗೊಳ್ಳುತ್ತದೆ."

(ರಾಧೆ ಮಾತು ನಿಲ್ಲಿಸಲಿಲ್ಲ. ಹರಿಯೊಂದಿಗೆ ರಮಿಸುತ್ತಾಳೆಂದು ಕಲ್ಪಿಸಿದ ಆ ತರುಣಿಯನ್ನೂ ತನ್ನನ್ನೂ ಯೋಚಿಸಿ ಹೀಗೆನ್ನುತ್ತಾಳೆ—)

— ಹದಿನಾರನೆಯ ಅಷ್ಟಪದಿ —

"ಸಖಿ, ಗಾಳಿಗೆ ಅಲ್ಲಾಡುವ ನೀಲೋತ್ಪಲದಂತೆ ನೇತ್ರಗಳಿರುವ ಹರಿಯು ಯಾವ ರಮಣಿಯೊಂದಿಗೆ ರಮಿಸುತ್ತಾನೋ ಅವಳಿಗೆ ಹೂವಿನ ಹಾಸಿಗೆ ಬೇಕಾಗಿಲ್ಲ; ಅವನೊಂದಿಗೆ ರಮಿಸಲಾಗದ ನನಗೂ ಬೇಕಾಗಿಲ್ಲ. ಅರಳಿದ ತಾವರೆಯಂತೆ ಮುಖವಿರುವ ಹರಿಯಿಂದ ರಮಿಸಲ್ಪಟ್ಟ ಲಲನೆಯು ಕಂದರ್ಪನ ದರ್ಪಕ್ಕೆ ಅಂಜಲಾರಳು—ರಮಿಸಲ್ಪಡದ ನಾನು ಅಂಜಲಾರೆನೇ? ಅಮೃತದಂತೆ ಇಂಪಾಗಿ ಮಾತನಾಡುವ ಹರಿಯ ಪ್ರೇಮಭಾಜನಕ್ಕೆ ಮಂದ ಮಾರುತನ ತಾಪವಿಲ್ಲ; ಪ್ರೇಮಪಾತ್ರಳಾಗದವಳಿಗೆ ತಾಪವಿಲ್ಲವೇ? ಕೆಂದಾವರೆಯಂತೆ ಸುಂದರವಾದ ಚರಣಗಳಿರುವ ಹರಿಯಿಂದ ರಮಿಸಲ್ಪಟ್ಟವಳು ಚಂದ್ರಿಕೆಯಿಂದ ಪರಿತಪಿಸುವುದಿಲ್ಲ; ರಮಿಸಲ್ಪಡದವಳು ಪರಿತಪಿಸದಿರಳೇ? ಶ್ಯಾಮಸುಂದರನಿಂದ ಪ್ರೇಮಿಸಲ್ಪಟ್ಟವಳ ಹೃದಯವು ಚಿರವಿರಹದಿಂದ ಬಿರಿಯಲಾರದು; ಪ್ರೇಮಿಸಲ್ಪಡದವಳ ಹೃದಯವು ಬಿರಿಯದಿರದೇ? ಸುವರ್ಣ

ಶಾಂತಿಯು ವಸ್ತ್ರಧರಿಸಿದ ಹರಿಯು ಒಡನಾಟವಿದ್ದವಳಿಗೆ ಜನರ ಅಪಹಾಸ್ಯ ದಿಂದ ನಷ್ಟವಿಲ್ಲ; ಒಡನಾಟವಿಲ್ಲದವಳಿಗೆ ನಷ್ಟವಿಲ್ಲವೇ? ತ್ರಿಭುವನ ಸುಂದರ ನಾದ ತರುಣ ಕೇಶವನ ಅಂಗಸಂಗಿನಿಗೆ ಬಾಧೆಯಿಲ್ಲ; ಅದಿಲ್ಲದವಳಿಗೆ ಬಾಧೆ ಯಿಲ್ಲವೇ?"

(ವಿರಹವೇದನೆಯಿಂದ ನೊಂದ ರಾಧೆಯು ಈಗ ಬೀಸುವ ತಂಗಾಳಿ ಯಿಂದ ಮತ್ತೂ ತಾಪಹೊಂದಿ ಅದನ್ನೇ ಕರೆದು ಹೇಳುತ್ತಾಳೆ—)

"ಕಾಮನಿಗೆ ಮಾತ್ರ ಪ್ರಿಯನಾದ ಎಲೈ ಚಂದನವನದ ಮಂದಾ ನಿಲನೇ, ನಿನ್ನ ದುರ್ಮಾರ್ಗವನ್ನು ತೊರೆದು ನನ್ನಲ್ಲಿ ಪ್ರಸನ್ನನಾಗು. ಜಗ ತ್ತಿಗೆ ಪ್ರಾಣನಾಗಿರುವವನೇ, ನನ್ನ ಪ್ರಾಣವನ್ನು ತೆಗೆಯಲಿಚ್ಛಿಸುವಿಯಾದರೆ ಒಂದರೆಕ್ಷಣ ಮಾಧವನನ್ನು ನನ್ನೆದುರಿಗೆ ತಾ. ಗೆಳತಿಯರೊಡನಾಟವೇ ವೈರಿಗಳ ಸಹವಾಸದಂತಾಗುತ್ತದೆ. ತಂಗಾಳಿಯು ಬೆಂಕಿಯಂತೆಯೂ, ಚಂದ್ರಕಿರಣ ವಿಷದಂತೆಯೂ ತೋರುತ್ತದೆ. ಎಷ್ಟು ತಡೆದರೂ ನನ್ನ ಮನಸ್ಸು ಆ ನಿಷ್ಕರುಣಿಯ ಕಡೆಗೆ ಧಾವಿಸುತ್ತಲೇ ಇದೆ. ನಳಿನಾಕ್ಷಿಯರ ವಿಷಯದಲ್ಲಿ ಕಾಮನು ಕ್ರೂರನಾಗಿದ್ದಾನೆ. ಅವನು ಸ್ವೇಚ್ಛೆಯಿಂದ ಮೆರೆ ಯುತ್ತಾನೆ, ಮಂದಾನಿಲನೇ, ಪೀಡಿಸು ಬೇಕಾದಷ್ಟು. ಪಂಚಬಾಣನೇ, ಸೆಳೆ ಈ ಪ್ರಾಣವನ್ನು. ಮನೆಗೆ ಮರಳಬೇಕೆಂದು ನನಗಿಲ್ಲ ಇಚ್ಛೆ. ಯಮುನ ಸೋದರಿಯೇ, ನಿನ್ನ ತರಂಗಗಳಿಂದ ನನ್ನ ಅಂಗಗಳನ್ನು ತೋಯಿಸಿ ಮುಳು ಗಿಸು. ಶಮಿಸಲಿ ನನ್ನ ತಾಪ."

(ಈ ರೀತಿ ರಾಧೆಯು ವಿಪ್ರಲಬ್ಧಳಾಗಿ ವಿಲಪಿಸುತ್ತಿದ್ದಳೆಂಬಲ್ಲಿಗೆ 7ನೆಯ ಸರ್ಗ ಮುಗಿದುದು. ಸರ್ಗಾಂತ್ಯದಲ್ಲಿ ಕವಿ ಹರಿಸ್ಮರಣೆ ಮಾಡುತ್ತಾನೆ—)

"ಇಂದ್ರಾದಿ ದೇವತೆಗಳು ಅಮೋದದಿಂದ ಯಾರ ಪಾದಾರವಿಂದ ವನ್ನು ವಂದಿಸುವಾಗ, ಅವರ ಕಿರೀಟದ ಇಂದ್ರನೀಲಮಣಿಗಳಿಂದಾಗಿ ಪಾದವು ನೀಲೋತ್ಪಲವೆಂದು ಭಾಸವಾಗುವುದೋ, ಯಾವ ಪಾದಕಮಲ ದಿಂದ ಮಕರಂದರಸದಂತೆ ಮಂದಾಕಿನಿಯು ಹರಿಯುತ್ತಾಳೋ ಅಂತಹ ಪಾದಪದ್ಮಗಳನ್ನು ವಂದಿಸಿದವರ ಅಮಂಗಲವು ನಾಶವಾಗಲಿ."

ಏಳನೆಯ ಸರ್ಗ ಮುಗಿದುದು

ಎಂಟನೆಯ ಸರ್ಗ

ವಿಲಕ್ಷ್ಯ ಲಕ್ಷ್ಮೀಪತಿ

(ರಾಧೆಯು ಮದನತಾಪವಿವಶಳಾಗಿ ಆ ರಾತ್ರಿಯನ್ನು ಹೇಗೆ ಹೇಗೋ ಕಳೆದಳು. ಹರಿಯೂ ಮಾನಸಿಕಯಾತನೆಯಿಂದ ಪರವಶನಾಗಿ ಕುಳಿತಲ್ಲೇ ಕುಳಿತುಬಿಟ್ಟಿದ್ದನು. ಮುಂಜಾನೆ ಅವನು ಬಂದು ರಾಧೆಯೆದುರಿಗೆ ನಿಂತು, ಬಗೆಬಗೆಯಿಂದ ಒಡಂಬಡಿಸುತ್ತಾ ನಮಸ್ಕರಿಸುತ್ತಾ ಇದ್ದನು. ಆದರೆ, ಹರಿಯು ಅನ್ಯ ಯುವತಿಯ ಬಾಹುಪಾಶದಿಂದ ಬಿಡಿಸಿಕೊಂಡು ಈ ಬಂದುದೆಂದು ಬಗೆದು ರಾಧೆಯು ಈರ್ಷ್ಯೆ ತಾಳಿ, ಖಂಡಿತಾನಾಯಿಕೆಯಂತಾಗಿ ಹೀಗೆನ್ನುತ್ತಾಳೆ—)

— ಹದಿನೇಳನೆಯ ಅಷ್ಟಪದಿ —

"ಹರಿ, ನಡೆನಡೆ. ಮಾಧವ, ಇಲ್ಲಿ ನಿಲ್ಲದಿರು. ಕೇಶವ, ಸುಳ್ಳು ಮಾತನ್ನಾಡಬೇಡ. ಹೇ ಕಮಲಾಕ್ಷ, ನಿನ್ನ ತಾಪವನ್ನು ಪರಿಹರಿಸುವಳು. ಯಾವಳೋ ಅವಳಲ್ಲಿಗೇನೇ ಹೋಗು. ರಾತ್ರಿಯ ಜಾಗರಣದ ಅನುರಾಗ—ಕೆಂಬಣ್ಣದಿಂದ ಕೂಡಿ ಅರೆದೆರೆದ ನಿನ್ನ ಕಣ್ಣು ಇನ್ನೂ ಶೃಂಗಾರದಲ್ಲಿ ಮುಳುಗಿದ್ದು, ಅವಳಲ್ಲಿರುವ ಅನುರಾಗವನ್ನೇ ಹೊತ್ತು ನಿಂತಿದೆ. ಓ ಕೃಷ್ಣ, ಕಾಡಿಗೆಯಿಂದ ಕಪ್ಪಾದ ಅವಳ ನೇತ್ರಗಳನ್ನು ಚುಂಬಿಸಿದ್ದರಿಂದ ನಿನ್ನ ತುಟಿಯೂ ಕಪ್ಪಾಗಿ ನಿನ್ನ ಬಣ್ಣವನ್ನೇ ತಾಳಿದೆ. ರತಿಕ್ರೀಡೆಯಲ್ಲಿ ವಿಜಯಗಳಿಸಿದ ಪ್ರಶಸ್ತಿಪತ್ರವನ್ನೇ ಹೋಲುತ್ತದೆ ನಿನ್ನೀ ದೇಹ. ಈ ಕಾಣುವ ನಖಕ್ಷತವು ಮರಕತರತ್ನದಲ್ಲಿ ನಿರ್ಮಿಸಿದ ಸುವರ್ಣಾಕ್ಷರದಂತೆ ಸ್ಪಷ್ಟವಾಗಿ ಕಾಣುತ್ತದೆ. ನಿನ್ನೆದೆಯಲ್ಲಿ ಅವಳ ಚರಣಕಮಲದಿಂದ ತಾಗಿದ ಲಾಕ್ಷಾರಸದ ಲೇಪವು ಮದನವೃಕ್ಷದ ಹೊಸ ಚಿಗುರಿನಂತೆ ಕಾಣುತ್ತದೆ. ನಿನ್ನ ಅಧರದಲ್ಲಿ ಆ ಕಾಮಿನಿ ಮಾಡಿದ ದಂತಕ್ಷತವನ್ನು ಕಾಣುವಾಗ ನನಗೆ ನೋವೆನಿಸುತ್ತದೆ. ಆದರೂ ನಮ್ಮಿಬ್ಬರ ದೇಹ ಅಭಿನ್ನವೆಂದು ಹೇಗೆ ಹೇಳಬಹುದು? ರಂಗ, ನಿನ್ನ ಮನಸ್ಸೂ ಹೊರಮೈಯಂತೆ ಮಲಿನವಾಗಿದ್ದಿರಬೇಕು. ಅಲ್ಲದ ಪಕ್ಷದಲ್ಲಿ—ನಿನ್ನನ್ನೇ ಹೊಂದಿಕೊಂಡಿದ್ದ ಜನ ಈ ರೀತಿ ಕಂದರ್ಪಪೀಡೆಗೊಳಗಾದಾಗ ವಂಚಿಸುತ್ತಿದ್ದಿಲ್ಲ. ನೀನು ಅಬಲೆಯರನ್ನು ಕೊಲ್ಲಲಿಕ್ಕಾಗಿಯೇ ಈ ವನಪ್ರದೇಶದಲ್ಲಿ ಸುತ್ತಾಡುತ್ತೀ. ಅದರ

ಲ್ಲೇನೂ ಆಶ್ಚರ್ಯವಿಲ್ಲ. ವಧುಗಳನ್ನು ಕೊಲ್ಲುವ ವಿಷಯದಲ್ಲಿ ಕಾರುಣ್ಯವೇ ಇಲ್ಲದ ನಿನ್ನ ಚಿಕ್ಕಂದಿನ ಕಥೆಯು ಪೂತನಿಯ ಸಂಗತಿಯಲ್ಲಿ ವ್ಯಕ್ತವಾಗಿದೆ."

(ರಾಧೆಯು ಕೃಷ್ಣನನ್ನು ಇನ್ನೂ ಅಧಿಕ್ಷೇಪಿಸುತ್ತಾಳೆ—)

"ಹರಿ, ಆ ನಿನ್ನ ಮನೋರಮೆಯ ಪಾದದ ಲಾಕ್ಷಾರಸ ತಾಗಿ ಕೆಂಪಾದ ನಿನ್ನೆದೆಯನ್ನು ಕಾಣುವಾಗ ಆಕೆಯ ಕುರಿತು ನಿನ್ನ ಹೃದಯದಲ್ಲಿ ಅನುರಾಗ ವುಂಟೆಂದು ಸ್ಪಷ್ಟವಾಗಿ ತೋರುತ್ತದೆ. ಇದು ಕಾಣುವಾಗ ಈ ಮಹತ್ವ ವೇರಿದ ನನ್ನ ಪ್ರಣಯಭಂಗದಿಂದಲಾಗಿ ನವಗುಂಟಾದ ಶೋಕಕ್ಕಿಂತಲೂ ನನಗೆ ಏನೋ ಒಂದು ತರದ ಲಜ್ಜೆಯೇ ಹೆಚ್ಚಾಗಿ ಆವರಿಸುತ್ತದೆ."

(ಕವಿಯು ಈ ಸರ್ಗವನ್ನು ಇಷ್ಟಕ್ಕೇ ಮುಗಿಸಿ ಹರಿಸ್ಮರಣೆ ಮಾಡುತ್ತಾನೆ.)

"ಮುಂಜಾನೆ ತಾನು ಕಪ್ಪುವಸ್ತ್ರವನ್ನುಟ್ಟುಕೊಂಡು, ರಾಧೆಯು ವಕ್ಷ ಸ್ಥಳದಲ್ಲಿ ತನ್ನ ಪೀತಾಂಬರವಿದ್ದುದನ್ನು ನೋಡಿ ಮಾಧವನು ಚಕಿತನಾದನು. ಅದನ್ನು ಕಂಡು ಸಖಿಯರು ನಗಾಡಿದರು. ಆಗ ಲಜ್ಜೆಯಿಂದ ಚಂಚಲ ವಾದ ತನ್ನ ಕಟಾಕ್ಷವನ್ನು ರಾಧೆಯ ಮುಖದೆಡೆಗೆ ಬೀರಿ ಮಂದಹಾಸ ಗೊಂಡ ಶ್ರೀಕೃಷ್ಣನು ಲೋಕಾನಂದಕರನಾಗಲಿ."

(8ನೆಯ ಸರ್ಗ ಮುಗಿದುದು.)

ಒಂಭತ್ತನೆಯ ಸರ್ಗ

ಮುಗ್ಧ ಮುಕುಂದ

(ರಾಧೆಯ ತಿರಸ್ಕಾರದಿಂದ ನೊಂದು ಮಾಧವನು ಪುನಃ ತನ್ನ ಏಕಾಂತಸ್ಥಳಕ್ಕೆ ಹೋದನು. ಪ್ರಣಯಕೋಪದಿಂದ ಪ್ರಿಯನನ್ನು ಆಕ್ಷೇಪಿಸಿ ಈಗ ಪಶ್ಚಾತ್ತಾಪಪಡುತ್ತಾಳೆ ಕಲಹಾಂತರಿತೆಯಾಗಿ—ರಾಧೆ. ಸ್ಮರತಾಪ ದಿಂದ ಪರಿತಪಿಸುತ್ತಾ ಇದ್ದವಳು ಹರಿಯಿಂದ ರತಿಸುಖ ಪಡೆಯದೆ ದುಃಖಿ ಸುತ್ತಾ ಹರಿಚರಿತೆಯನ್ನೇ ಚಿಂತಿಸುತ್ತಾಳೆ. ಆಗ ಸಖಿಯು ಅವಳೊಡನೆ ಹೇಳುತ್ತಾಳೆ—)

— ಹದಿನೆಂಟನೇ ಅಷ್ಟಪದಿ —

"ಓ ಅಭಿಮಾನವುಳ್ಳವಳೇ, ನೀನು ಮಾಧವನ ಮಟ್ಟಿಗೆ ಮಾತ್ರ ಇಷ್ಟು ಅಭಿಮಾನ ತಾಳಬೇಡ. ವಸಂತ ಮಾರುತವು ಬೀಸುವಾಗ ಆ

ಪ್ರೀತಿ ಸ್ವರೂಪನು ನಿನ್ನೆಡೆಗೆ ಬಂದೇ ಬರುತ್ತಾನೆ. ಇದಕ್ಕಿಂತಲೂ ಹೆಚ್ಚಾದ ಸುಖ ನಿನಗೆ ಮನೆಯಲ್ಲೇನಿದೆ? ಅವ್ವಾ, ತಾಳಿಫಲಕ್ಕಿಂತಲೂ ಗುರುತರವೂ ರಸಮಯವೂ ಆದ ನಿನ್ನೀ ಕುಚಕಲಶವನ್ನು ಕೋಪದಿಂದೇಕೆ ವ್ಯರ್ಥಗೊಳಿಸುತ್ತಿ? ಮೋಹನಾಂಗನಾದ ಹರಿಯನ್ನು ಅವಗಣಿಸಬೇಡವೆಂದು ನಾನೆಷ್ಟು ಬಾರಿ ನಿನಗೆ ಹೇಳಲಿಲ್ಲ? ಈಗೇಕೆ ಅವಶಳಾಗಿ ದುಃಖಿಸುತ್ತಿ? ಏಕೆ ಅಳುತ್ತಿ? ಸಕಲ ಯುವತೀ ಸಖಿಯರು ನಿನ್ನ ಪಾಡುನೋಡಿ ನಗುತ್ತಾರೆ. ಕೋಮಲವಾದ ನಳಿನೀದಳದ ತಣ್ಣನೆಯ ಹಾಸಿಗೆಗೆ ಕಾಂತನನ್ನು ಬರಮಾಡು; ಅವನನ್ನು ನೋಡಿ, ನಿನ್ನ ಕಣ್ಣುಗಳನ್ನು ಸಫಲಗೊಳಿಸು. ಮನದಲ್ಲಿ ಖೇದಪಡಬೇಡ. ನಿನಗೆ ಹಿತವಾದ ಮಾತನ್ನು ಹೇಳುತ್ತೇನೆ ಕೇಳು. ಅದೇನೆಂದರೆ—ಹರಿಯು ನಿನ್ನೆಡೆಗೆ ಬರಲಿ. ಅತನು ಮಧುರ ಮಾತನ್ನಾಡಲಿ. ಮನಸ್ಸನ್ನು ಹೀಗೆ ತಳಮಳಗೊಳಿಸಬೇಡ."

(ಇಷ್ಟು ಹೇಳಿ, ರಾಧೆಯು ಕೃಷ್ಣನನ್ನು ತಿರಸ್ಕರಿಸಿದ್ದಕ್ಕಾಗಿ ಸಖಿಯು ಪುನಃ ಆಕ್ಷೇಪಿಸುತ್ತಾಳೆ.)

"ಎಲೌ ವಿಪರೀತಕಾರ್ಯವೆಸಗುವವಳೇ, ಅತನು ಸ್ನೇಹಪರನಾಗಿ ಬಂದಾಗ ನೀನು ಕಠೋರಳಾದೆ; ವಿನಯದಿಂದ ನಮಿಸುವಾಗ ಕಂಬದಂತೆ ಸ್ತಬ್ಧಳಾದೆ; ಅನುರಾಗಗೊಂಡಾಗ ಕೋಪಗೊಂಡೆ; ನಿನಗಭಿಮುಖನಾದ ನೀನು ವಿಮುಖಳಾದೆ ಆದ್ದರಿಂದ ಚಂದನದ ಮಾತೇ ನಿನಗೆ ವಿಷವೆನಿಸಿತು; ಚಂದ್ರನು ಸೂರ್ಯನಂತಾದನು; ಹಿಮವು ಬೆಂಕಿಯಾಯಿತು; ಆಟವಿನೋದವು ನಿನ್ನ ಪಾಲಿಗೆ ಯಾತನಾವಿಷಯವಾಯಿತು-ನಿನಗಿದೇ ಬೇಕಾದುದು."

(ಇಂತೆಂಬಲ್ಲಿಗೆ 9ನೆಯ ಸರ್ಗ ಮುಗಿದುದರಿಂದ ಕವಿಯು ಪ್ರಾರ್ಥನೆ ಮಾಡುತ್ತಾನೆ—)

"ಯಾವ ಧ್ವನಿಯನ್ನು ಕೇಳಿ ವ್ರಜಾಂಗನೆಯರು ಮುಗ್ಧರಾಗಿ ತಲೆಯಲ್ಲಾಡಿಸುತ್ತಿದ್ದರೋ, ಯಾವುದು ಜನಮನವನ್ನಾಕರ್ಷಿಸುತ್ತಾ ಉತ್ಸಾಹ ನೀಡುವುದೋ, ಯಾವುದು ಮದಗರ್ವಿತರಿಂದ ನೊಂದ ಸಾತ್ವಿಕರ ದುಃಖವನ್ನು ನೀಗಿಸುವದೋ ಅಂತಹ ಮಹಾಮಂತ್ರಸ್ವರೂಪವಾದ ಕಂಸಾರಿಯ ವೇಣುನಾದವು ನಿಮ್ಮ ದುರಿತಗಳನ್ನು ದೂರೀಕರಿಸಲಿ."

9ನೇ ಸರ್ಗ ಮುಗಿದುದು.

ಹಾಗೂ ಹೀಗೂ ಹೋಗು. ಹಾಗೆ ಬಳಿ ಸಾರುವ ನಿನ್ನ ಉಲ್ಲಾಸಪ್ರದ ಅಂಗಗಳನ್ನು ನೋಡಿ ಸೌಭಾಗ್ಯಶಾಲಿ ರಂಗನು ಕೃತಾರ್ಥನಾಗಲಿ."

(ಇಲ್ಲಿಗೆ ೫ನೆಯ ಸರ್ಗ ಮುಗಿದುದು. ಕವಿಯು ಸರ್ಗಾವಸಾನದ ಪ್ರಾರ್ಥನೆ ಮಾಡುತ್ತಾನೆ —)

"ಯಾವನು ರಾಧೆಯ ವದನಕಮಲಕ್ಕೆ ಭ್ರಮರಸ್ವರೂಪನೂ, ವೃಂದಾವನಾಲಂಕಾರಕ್ಕೆ ನೀಲಮಣಿಯೂ, ಭೂಭಾರಕ್ಕಾಗಿ ಹುಟ್ಟಿದ ದೈತ್ಯರನ್ನು ಸಂಹರಿಸಿದವನೂ, ವ್ರಜಸುಂದರಿಯರ ಮನೋರಥ ಪೂರೈಸಲು ಸಂಧ್ಯಾರೂಪಿಯಾದವನೂ, ಕಂಸವಿಧ್ವಂಸಕನೂ ಆಗಿರುವನೋ ಆ ದೇವಕೀನಂದನನು ನಿಮ್ಮನ್ನು ಬಹುಕಾಲ ಕಾಪಾಡಲಿ.

(೫ನೇ ಸರ್ಗ ಮುಗಿದುದು.)

ಆರನೆಯ ಸರ್ಗ

ಧನ್ಯ ವೈಕುಂಠ

(ರಾಧೆಯು ಕೃಷ್ಣಾನುರಾಗಿಣಿಯಾಗಿದ್ದರೂ ಕೂಡಾ ಅವನಿದ್ದೆಡೆಗೆ ನಡೆಯಲು ಅಶಕ್ತಳಾಗಿ ಅಲ್ಲಿರುವ ಲತಾಗೃಹದಲ್ಲೇ ಕುಳಿತಳು. ಅವಳ ಶೋಚನೀಯ ಸ್ಥಿತಿಯನ್ನು ಕಂಡು ಸಖಿಯು ಬೇಗನೇ ಗೋವಿಂದನೆಡೆಗೆ ನಡೆದು ಅವನೊಡನೆ ಹೇಳುತ್ತಾಳೆ—)

— ಹನ್ನೆರಡನೆಯ ಅಷ್ಟಪದಿ —

"ಹರಿಯೇ, ರಾಧೆಯು ನಿನ್ನ ಆ ಲತಾಮಂದಿರದಲ್ಲಿ ಅಧರಮಧುರಸ ಪಾನಪ್ರಿಯನಾದ ನಿನ್ನನ್ನು ಪ್ರತೀಕ್ಷಿಸುತ್ತಿದ್ದಾಳೆ. ಒಡೆಯಾ, ನಿನ್ನ ನಿಮಿತ್ತವಾಗಿ ಅವಳು ತುಂಬಾ ಕಷ್ಟಪಡುತ್ತಾಳೆ. ನಿನ್ನನ್ನು ಅಭಿಸರಣಮಾಡಬೇಕೆಂದು ಉತ್ಸಾಹದಿಂದ ಹೊರಟು, ಕೆಲವು ಹೆಜ್ಜೆಗಳನ್ನು ನಡೆದಾಗ ಸ್ಮೃತಿತಪ್ಪಿ ಬೀಳುತ್ತಾಳೆ. ಕಮಲ ನಾಳವನ್ನು ಮಾತ್ರ ಕಂಕಣವಾಗಿ ತೊಟ್ಟಿರುವ ಅವಳು ನಿನ್ನ ರತಿಸುಖದ ಬಯಕೆಯಿಂದ ಮಾತ್ರ ಬದುಕಿಕೊಂಡಿರುತ್ತಾಳೆ. 'ಹರಿಯು ಈ ಅಭಿಸಾರ ಪ್ರದೇಶಕ್ಕೆ ಏಕೆ ಬರುವುದಿಲ್ಲ?' ಎಂದು ನಮ್ಮೊಡನೆ ಆಗಾಗ ಕೇಳುತ್ತಾಳೆ. ಕೆಲವೇಳೆ 'ಹರಿ ಬಂದೇಬಂದನು'

[10ನೇ ಪುಟವು ಕವರಿನ 2ನೇ ಪುಟಕ್ಕೆ ಮುಂದುವರಿದಿದೆ.]

Edited, Printed & Published by K. V. Shenoy
at The Prabhat Printers Ltd., Mangalore.